
ಪದಬಂಧ



ಎಡದಿಂದ ಬಲಕ್ಕೆ:

1. ವ್ಯವಹಾರದ ವಿಷಯದಲ್ಲಿ ಭಾರೀ ಚರ್ಚೆ, ಕಲಹ 3
3. ಕುಪಿತರಾದಾಗ ಎಂಥವರೂ ಅಂದಗೆಟ್ಟವರೇ ತಾನೇ? 3
4. ವ್ಯವಸ್ಥೆ ಏನೇ ಇರಲಿ, ಸೂಕ್ತ ವಸ್ತ್ರವಂತೂ ಇರಬೇಕು 3
6. ನಲಿವಿನ ಸಂಭ್ರಮಾಚರಣೆಗೆ ತಾವರೆಯನ್ನು ತಂದರೇ? 3
7. ಈ ಪರಿಯ ಅಲಂಕರಣಕ್ಕೆ ಬೇಕೇ ಬೇಕು ನಾನಾ ಸಲಕರಣೆ 4
9. ಆ ಊರಿನ ಜಾತ್ರೆಗೆ ಹೋಗಲು ತಕ್ಕ ಸಂಗಡಿಗ ಈತ 4
11. ತಾಪತ್ರಯದ ಶಿಖರ ಮುಟ್ಟಿದ್ದು ಹುಣ್ಣಿಮೆಗೆ ಎರಡು ದಿನ ಹಿಂದೆ 4
13. ತಳಿರು ತೋರಣ ಕಟ್ಟುವ ಈ ಕ್ರಮ ಬಂದು ಪೀಳಿಗೆಗಳೇ ಕಳೆದಿವೆ 4
15. ಸಂಜೆಯಾದರೆ ಸಾಕು, ಅವರ ಮನೆಯಲ್ಲೇ ಗುಂಪು, ಗೋಷ್ಠಿ 3
17. ಮಹಾದ್ವಾರ ತೆರೆಯಹೋದಾಗ ಸಂಭವಿಸಿದ್ದು ಇಂಥ ದುರ್ಘಟನೆ 3
18. ನೂಕುನುಗ್ಗಲಿನಲ್ಲಿ ಕಳೆದುಹೋಯಿತು ಮುಂಗುಸಿ 3
19. ತೋಟಕ್ಕೆ ಹೋಗುವ ಹಾದಿಯಲ್ಲಿ ಎಂಥ ಸುಂದರ ಕೆರೆ ನೋಡಿ! 3

ಮೇಲಿಂದ ಕೆಳಕ್ಕೆ:

1. ವ್ಯಾಪ್ತಿಯನ್ನ ದಿನೇ ದಿನೇ ಕಳೆದುಕೊಳ್ಳುತ್ತಿದೆ ಅರಣ್ಯ 3
2. ಮಹಾದೇವನ ಹಬ್ಬಕ್ಕೆ ತಂದದ್ದು ಸುವಾಸನಾ ಎಲೆಯ ಗಿಡ 3
3. ಕಷ್ಟದ ಹಾಹಾಕಾರದ ಬಗೆಗೂ ವ್ಯಂಗ್ಯವಾಡುವುದೇ? 3
5. ಮರೆತೆನೆಂಬುದೇ ಇಲ್ಲ, ಸದಾ ಇದೇ ವಿನಯಶೀಲತೆ 3
7. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಎಲ್ಲರ ಸ್ಥಿತಿಯೂ ಇತರರ ಅಧೀನ 4
8. ಋಷಿಯ ಪ್ರಯತ್ನದಿಂದ ಬಂದದ್ದು ಈ ಅಮೂಲ್ಯ ಮಣಿಗಳ ಗುಡ್ಡೆ 4
9. ಜೋರು ಮಾತುಗಳನ್ನು ಕೇಳಿ ಕೇಳಿ ಸುಸ್ತೋ ಸುಸ್ತು 4
10. ಕರ್ತಾರನದೇ ಸೃಷ್ಟಿ, ಕೈಗೆ ನಿಧಿ ಸೇರಿದ ಮಹಾ ಸಾಗರ ಕೂಡ 4
12. ದೂರದೂರ ಹೋಗಲೇಕೆಂಬ ಅವಸರವಾದರೂ ಏನು? 3
14. ಲಾಗ ಹೊಡೆಯುವುದರಲ್ಲಿ ನಿಸ್ಸೀಮನೆಂದರೆ ಮಂಗ ತಾನೇ? 3
15. ಸತ್ಯ ಕಥೆಗಳನ್ನು ಹುಡುಕುತ್ತಲೇ ಇದ್ದಾನೆ ನಿರಂತರ 3
16. ಜೇನು ಕುರುಬರ ಈ ಕುಟುಂಬದ ತಂದೆ ಯಾರು? 3

## 11-7-2019 ಉತ್ತರಗಳು

ಎಡದಿಂದ ಬಲಕ್ಕೆ:
1. ವಿಶ್ರಾಂತ 3. ಬರಿದು 4. ಗಾಬರಿ 6. ವಿನಾಯಿತಿ 7. ಮುಜುಗರ 9. ಸರ್ಪವಿಧ 11. ಸತ್ಯವಂತೆ 15. ತತ್ತರ 16. ರುಮಾಸು (ಸುಮಾರು ಹಿಂದುಮುಂದು) 17. ಗರೀಬ
ಮೇಲಿಂದ ಕೆಳಕ್ಕೆ:
1. ವಿರುದ್ಧ 2. ತಗಾದೆ 3. ಬಡಾಯಿ 5. ರಿವಾಜು 6. ವಿಶ್ವಾಸ 8. ರಮ್ಯತೆ 10. ವಿನೀತ 12. ತ್ಯಜಿಸು 13. ಉರಗ 14. ಕುರುಬ

### ತಿದ್ದುಪಡಿ

ಜುಲೈ 4 ರ ಸಂಚಿಕೆಯ ಪದಬಂಧದಲ್ಲಿ ಅದೇ ವಾರದ ಉತ್ತರ ಪ್ರಕಟವಾಗಿತ್ತು. ಜೂನ್ 27ರ ಸಂಚಿಕೆಯ ಪದಬಂಧದ ಉತ್ತರಗಳು ಇಲ್ಲಿವೆ.
ಎಡದಿಂದ ಬಲಕ್ಕೆ: 1. ಚತುಷ್ಪಾದಿ 3. ಒಳಿತು 4. ವಾರಿಜ 6. ರಸದಾಳಿ 7. ಕಟುಕ 9. ಮುನಿಸು 11. ದುರುಳ 13. ಮುದುರು 15. ಗೆಳೆತನ 17. ನವಣೆ 18. ಭವನ 19. ಯಮಾಲಯ
ಮೇಲಿಂದ ಕೆಳಕ್ಕೆ: 1. ಚತುರ 2. ದಿವಾಳಿ 3. ಒರಟು 5. ಜನನಿ 7. ಕರಿದು 8. ಕರಾಳ 9. ಮುಲಾಮು 10. ಸುಮಾರು 12. ರುಜಿನ 14. ದುಮ್ಮಾನ 15. ಗೆಣೆಯ =ಗೆಳೆಯ) 16. ನಭಯ

ಪ್ರಶ್ನಾ ಂಕಣ

# ಕಂದು ಗಿಣಿ: ಏನು ವಿಶೇಷ?

ಕಂದು ಗಿಣಿ (ಗ್ರೇ ಪ್ಯಾರಟ್). ಅದು ಆಫ್ರಿಕಾದ ಒಂದು ಗಿಣಿ ಪ್ರಭೇದ. ಮಧ್ಯ ಆಫ್ರಿಕಾದ ವೃಷ್ಟಿವನ ಮತ್ತು ಹುಲ್ಲು ಬಯಲು ಪ್ರದೇಶಗಳಲ್ಲಿ ನೈಸರ್ಗಿಕವಾಗಿ ನೆಲೆಗೊಂಡಿರುವ ಈ ಗಿಣಿ ಕಂಡವರಿಗೆಲ್ಲ ಕೂಡಲೇ ಅಚ್ಚುಮೆಚ್ಚಾಗುತ್ತದೆ. ಈ ಗುಣವೇ ಅದರ ಬದುಕಿಗೆ ತುಂಬ ವಿಪತ್ಕಾರಿಯಾಗಿದೆ ಕೂಡ.

ಅಚ್ಚುಮೆಚ್ಚಾಗುವುದು ಏಕೆಂದರೆ ಮೊದಲಿಗೆ ಕಂದು ಗಿಣಿಯದು ಬಹಳ ಸುಂದರ ರೂಪ. ಈ ಹಕ್ಕಿಯ ಶಿರ ಮತ್ತು ರೆಕ್ಕೆಗಳ ಪುಕ್ಕ ಮತ್ತು ಗರಿಗಳದು ಬಹು ಆಕರ್ಷಕ ತಿಳಿ ಕಂದು ವರ್ಣ; ಶರೀರದ ಗರಿಪುಕ್ಕಗಳಿಗೆ ಬೆಳ್ಳಿ ಬಣ್ಣದ ಅಂಚು; ಬಾಲದ ಗರಿಗಳದು ಮೋಹಕ ಕೆಂಪು ಬಣ್ಣ (ಚಿತ್ರ ನೋಡಿ). ಸುಮಾರು ಒಂದು ಅಡಿ ಉದ್ದ, ಒಂದೂವರೆ ಅಡಿ ರೆಕ್ಕೆ ವಿಸ್ತಾರ ಮತ್ತು ನಾಲ್ಕು ನೂರು ಗ್ರಾಂ ತೂಕ... ಹಾಗೆ ಒಟ್ಟಾರೆ ಮಧ್ಯಮ ಗಾತ್ರದ ಈ ಹಕ್ಕಿ 'ಪಂಜರದ ಪಕ್ಷಿ'ಯಾಗಿ, ಮುದ್ದಿನ ಸಾಕು ಹಕ್ಕಿಯಾಗಿರಲು ತುಂಬ ಸೂಕ್ತ.



ಅಷ್ಟೇ ಸಾಲದು ಎಂಬಂತೆ ಕಂದು ಗಿಣಿ ಬಹಳ 'ಬುದ್ಧಿವಂತ' ಕೂಡ! ಅದರದು ಸರಿ ಸುಮಾರು ಆರು ವರ್ಷ ವಯಸ್ಸಿನ ಮನುಷ್ಯ ಶಿಶುವಿಗೆ ಸಮನಾಗುವಂತಹ ಬೌದ್ಧಿಕ ಸಾಮರ್ಥ್ಯ! ಈ ಹಕ್ಕಿಗಳು ಸರಳ ಸಂಖ್ಯಾ ಸರಣಿಗಳನ್ನು ನೆನಪಿಟ್ಟುಕೊಳ್ಳುತ್ತವೆ; ಕೇವಲ ಧ್ವನಿಯನ್ನು ಆಧರಿಸಿಯೇ ತಮ್ಮ ಸುತ್ತಲ ಬೇರೆ ಬೇರೆ ಮನುಷ್ಯರನ್ನು ಗುರುತಿಸುತ್ತವೆ; ಮನುಷ್ಯರ ಯಾವುದೇ ಭಾಷೆಯ ನೂರಾರು ಪದಗಳನ್ನು ಕೇಳ್ಮೆಯಿಂದಲೇ ಕಲಿಯುತ್ತವೆ, ನುಡಿಯುತ್ತವೆ!

ಇನ್ನೂ ಮಿಗಿಲಾಗಿ ಕಂದು ಗಿಣಿಗಳಿಗೆ ಅತ್ಯದ್ಭುತ 'ಅನುಕರಣಾ ಸಾಮರ್ಥ್ಯ' ಇದೆ. ಮನುಷ್ಯರ ಮಾತುಗಳನ್ನು, ಎರಡು ಮೂರು ಪದಗಳ ವಾಕ್ಯಗಳನ್ನು ಅಚ್ಚರಿಯೆನಿಸುವಷ್ಟು ಹೋಲುವಂತೆ ಈ ಹಕ್ಕಿಗಳು ಅನುಕರಿಸುತ್ತವೆ. ಅಷ್ಟೇ ಅಲ್ಲದೆ ತಮ್ಮ ಸುತ್ತಮುತ್ತ ಮತ್ತೆ ಮತ್ತೆ ಕೇಳಿ ಬರುವ ಯಾವುದೇ ಶಬ್ದಗಳನ್ನು ಹಾಗೆಯೇ ಪುನಃ ಪುನಃ ಉಚ್ಚರಿಸುತ್ತಲೇ ಇರುತ್ತವೆ. ಕಂದು ಗಿಣಿ ದೀರ್ಘಾಯುಷಿ ಕೂಡ; ಅವು ಐವತ್ತರಿಂದ ಅರವತ್ತು ವರ್ಷ ಕಾಲ ಬದುಕುತ್ತವೆ ! ಕಂದು ಗಿಣಿಗಳಿಗೆ ಗುಂಪು ಜೀವನ ತುಂಬ ಪ್ರಿಯ. ಅದಕ್ಕೇ ನೈಸರ್ಗಿಕ ನೆಲೆಗಳಲ್ಲಿ ಈ ಹಕ್ಕಿಗಳು ಸಾವಿರಾರು ಸಂಖ್ಯೆಯ ತಂಡಗಳಲ್ಲಿ ಬದುಕು ನಡೆಸುತ್ತವೆ.

ಇಂಥವೆಲ್ಲ ವೈಶಿಷ್ಟ್ಯಗಳಿಂದಾಗಿ ಕಂದು ಗಿಣಿ ಜಗದಾದ್ಯಂತ ಅತ್ಯಂತ ಜನಪ್ರಿಯ 'ಮುದ್ದಿನ ಪ್ರಾಣಿ'ಯಾಗಿದೆ. ಭಾರೀ ಬೆಲೆಯನ್ನು ಕೊಟ್ಟು ಈ ಹಕ್ಕಿಗಳನ್ನು ಕೊಳ್ಳಬಯಸುವ ಜನ ಹೇರಳ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಸಹಜವಾಗಿಯೇ ಆಫ್ರಿಕಾದ ಅಡವಿಗಳಲ್ಲಿ ಈ ಹಕ್ಕಿಗಳ 'ಕಳ್ಳ ಬೇಟೆ' ಅವ್ಯಾಹತವಾಗಿ ಬೃಹತ್ ಪ್ರಮಾಣದಲ್ಲಿ ನಡೆಯುತ್ತಲೇ ಬಂದಿದೆ. ಪ್ರತಿ ವರ್ಷ ಗುಟ್ಟಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಸೆರೆಯಾಗುವ ಈ ಹಕ್ಕಿಗಳು ಕಳ್ಳ ಸಾಗಾಣಿಕೆಯ ಹಾದಿಯಲ್ಲೇ ಶೇ. ತೊಂಬತ್ತರಷ್ಟು ಸಾಯುತ್ತವೆ. ಉಳಿದ ಹಕ್ಕಿಗಳು ಪ್ರತಿಯೊಂದೂ ಸರಾಸರಿ ಎರಡು ಲಕ್ಷ ರೂ.ಗಳಿಗೆ ಮಾರಾಟವಾಗುತ್ತವೆ; ಪಂಜರ ಸೇರಿ ಬೇಸರದ, ಸ್ವಾತಂತ್ರ್ಯವಿಲ್ಲದ ಒಂಟಿ ಜೀವನಕ್ಕೆ ಸಿಲುಕುತ್ತವೆ. ಇದು ಕಂದು ಗಿಣಿಗಳ ಒಂದು ದುರಂತ ವಿಶೇಷ.

■ ಎನ್. ವಾಸುದೇವ್